International Journal of Kannada Research
www.kannadajournal.com

**ISSN: 2454–5813**
IJKR 2019; 5(1): 204-210
© 2019 IJKR
www.kannadajournal.com
Received: 14-11-2018
Accepted: 17-12-2018

**ಶ್ರೀ ಸುವೀರ್‌ಜೈನ್**
ಸಂಶೋಧನಾಕೇಂದ್ರ,
ಅಭಿವೃದ್ಧಿಅಧ್ಯಯನ ವಿಭಾಗ
(ಕನ್ನಡ ವಿಶ್ವವಿದ್ಯಾಲಯ ಹಂಪಿ,
ಸಂಯೋಜಿತ) ಎಸ್.ಡಿ.ಎಮ್.
ಕಾಲೇಜು, ಉಜಿರೆ

**Correspondence**
**ಶ್ರೀ ಸುವೀರ್‌ಜೈನ್**
ಸಂಶೋಧನಾಕೇಂದ್ರ,
ಅಭಿವೃದ್ಧಿಅಧ್ಯಯನ ವಿಭಾಗ
(ಕನ್ನಡ ವಿಶ್ವವಿದ್ಯಾಲಯ ಹಂಪಿ,
ಸಂಯೋಜಿತ) ಎಸ್.ಡಿ.ಎಮ್.
ಕಾಲೇಜು, ಉಜಿರೆ

# ಉದ್ಯಮಶೀಲತಾಭಿವೃದ್ಧಿಯಲ್ಲಿ ತರಬೇತಿ ಸಂಸ್ಥೆಗಳ ಪಾತ್ರ

**ಶ್ರೀ ಸುವೀರ್‌ಜೈನ್**

**ಮುನ್ನುಡಿ**

ಆರ್ಥಿಕ ಅಭಿವೃದ್ಧಿಗೆ ಸರಕಾರವು ಪ್ರಾಶಸ್ತ್ಯ ನೀಡುತ್ತಿದೆ. ಆದರೆ ಜಾಗತಿಕರಣ, ಉದಾರೀಕರಣ, ಮತ್ತು ಖಾಸಗೀಕರಣದ ಹಿನ್ನೆಲೆಯಲ್ಲಿ ಈ ಪ್ರಾಶಸ್ತ್ಯವು ಸರಕಾರಿ ಸ್ವಾಮ್ಯದ ಉದ್ಯಮಗಳಿಂದ ಖಾಸಗಿ ವಲಯದ ಉದ್ಯಮಗಳ ಕಡೆ ವಾಲುತ್ತಿದೆ. ಭವಿಷ್ಯದಲ್ಲಿ ಅಭಿವೃದ್ಧಿಯು ಜನಸಾಮಾನ್ಯರಿಂದ ಬರಬೇಕೇ ಹೊರತು ಸರಕಾರದಿಂದ ಅಲ್ಲ. ಈ ಬದಲಾವಣೆಯನ್ನು ತರುವುದು ಸಮರ್ಥ ವಾಣಿಜ್ಯೋದ್ಯಮಿಗಳಿಂದ ಮಾತ್ರ ಸಾಧ್ಯ. “ಅಭಿವೃದ್ಧಿಯು ಆರ್ಥಿಕ ಸ್ಥಿತಿಯು ಅನುಕೂಲಕರವಾಗಿರುವಾಗ ಉಂಟಾಗುವ ನೈಸರ್ಗಿಕ ಪ್ರಕ್ರಿಯೆಯಲ್ಲ. ಅಭಿವೃದ್ಧಿಗೆ ಸೂಕ್ತ ವೇಗವರ್ಧಕ ಅಥವಾ ಸಂಪನ್ಮೂಲದ ಅಗತ್ಯವಿದ್ದು, ವಾಣಿಜ್ಯೋದ್ಯಮಗಳ ಸ್ಥಾಪನೆಯೇ ಈ ಪ್ರಕ್ರಿಯೆಯ ಅಡಿಗಲ್ಲಾಗಿದೆ” ಎಂಬುದು ಮೀಯರ್ ಮತ್ತು ಬಾಲ್ಡ್‌ವಿನ್‌ರ ದೃಷ್ಟಿಕೋನವಾಗಿದೆ. ವಿಪರ್ಯಾಸವೆಂದರೆ ಈ ಸಂಪನ್ಮೂಲವು ವಿಶ್ವದಾದ್ಯಂತ ಒಂದೇ ಸಮನಾಗಿ ವಿತರಣೆಯಾಗಿಲ್ಲ ಮಾತ್ರವಲ್ಲ ಒಂದೇ ದೇಶದೊಳಗೂ ಇದು ಒಂದೇ ಸಮನಾಗಿ ಕಂಡು ಬರುವುದಿಲ್ಲ. ಅರ್ಥಾತ್, ವಾಣಿಜ್ಯೋದ್ಯಮಕ್ಕೆ ಸಾಕಷ್ಟು ಅವಕಾಶಗಳಿದ್ದರೂ ವಿವಿಧ ಕಾರಣಗಳಿಂದಾಗಿ ನಮ್ಮ ಸಮಾಜದಲ್ಲಿ 90% ವಾಣಿಜ್ಯೋದ್ಯಮಿಗಳು ಇನ್ನೂ ಸುಪ್ತಾವಸ್ಥೆಯಲ್ಲಿದ್ದಾರೆ.

ಪ್ರಯತ್ನಶೀಲತೆಯು ಒಬ್ಬ ವ್ಯಕ್ತಿಯನ್ನು ಉದ್ಯಮಿಯಾಗಿ ಪರಿವರ್ತಿಸುತ್ತದೆ. ಈ ಪ್ರಯತ್ನಶೀಲತೆಯಿಂದಲೇ ಅಲೆಮಾರಿಯಾಗಿ ಜೀವನ ಸಾಗಿಸುತ್ತಿದ್ದ ಮನುಷ್ಯನು ಒಂದೆಡೆ ಬಿಡಾರ ಹೂಡಿ ಹೈನುಗಾರಿಕೆ, ಕೃಷಿ, ವ್ಯಾಪಾರ ಹಾಗೂ ಉದ್ಯಮ ನಡೆಸುವುದನ್ನು ಕಲಿತ. ಅದು ಕೃಷಿಯಾಗಿರಲಿ, ಕೈಗಾರಿಕೆಯಾಗಿರಲಿ, ವ್ಯಾಪಾರವಾಗಿರಲಿ ಅಥವಾ ಸೇವಾಕ್ಷೇತ್ರವಾಗಿರಲಿ, ಇಂದು ವಾಣಿಜ್ಯೋದ್ಯಮಿಗಳು ಉದ್ಯಮವನ್ನು ಆರಂಭಿಸಿ, ಸಂಘಟಿತವಾಗಿ ನಡೆಸಿ, ಉತ್ಪಾದನೆಯಿಂದ ಸಿದ್ಧ ವಸ್ತುಗಳ ಸರಬರಾಜು ಹಾಗೂ ಸೇವೆಗಳನ್ನು ಒದಗಿಸುತ್ತಾರೆ. ವಾಣಿಜ್ಯೋದ್ಯಮಿಗಳು ಇಂದಿನ ಯುಗದ ಆರ್ಥಿಕ ಅಭಿವೃದ್ಧಿಯ ಕೇಂದ್ರ ಬಿಂದುವಾಗಿದ್ದು ಮುಕ್ತ ಮಾರುಕಟ್ಟೆಯನ್ನು ಮುನ್ನಡೆಸುವ ಚಾಲನ ಶಕ್ತಿಯಾಗಿದ್ದಾರೆ. ಉದ್ಯಮಶೀಲತೆಯು ಕೃಷಿ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ಅಭಿವೃದ್ಧಿ ಉಂಟಾಗಲು ಕಾರಣವಾಗಿದೆ. ಅಭಿವೃದ್ಧಿ ಹೊಂದುವುದು ಅಥವಾ ಹೊಂದದೇ ಇರುವುದು ಯಾವುದೇ ಸಮಾಜದ ಉದ್ಯಮಶೀಲತೆ ಅಥವಾ ಉದ್ಯಮಶೀಲತೆಯ ಕೊರತೆಯ ಕೈಗನ್ನಡಿಯಾಗಿದೆ.

ದೇಶದ ಆರ್ಥಿಕತೆಯ ವಿವಿಧ ಕ್ಷೇತ್ರಗಳಲ್ಲಿ ಉದ್ಯಮಿಗಳು ನೀಡಿರುವ ಕೊಡುಗೆಯನ್ನು ಅವಲೋಕಿಸಿದರೆ ಆರ್ಥಿಕ ಅಭಿವೃದ್ಧಿಯಲ್ಲಿ ಅವರ ಪಾತ್ರದ ಅರಿವಾಗುತ್ತದೆ. ಉದ್ಯಮಿಗಳು ತಮಗೆ ಲಭಿಸಿದ ಸಂಪನ್ಮೂಲಗಳನ್ನು ಸ್ವಲ್ಪವೂ ವ್ಯರ್ಥ ಮಾಡದೆ ವಿನಿಯೋಗಿಸುತ್ತಾರೆ. ತಮ್ಮ ಪ್ರಯತ್ನದಲ್ಲಿ ಯಶಸ್ವಿಯಾಗುವ ಉದ್ಯಮಿಗಳು ದೇಶದ ಆರ್ಥಿಕ ಅಭಿವೃದ್ಧಿಗೆ ಕಾರಣರಾದರೆ ವಿಫಲರಾದವರು ನೇಪಥ್ಯಕ್ಕೆ ಸರಿಯುತ್ತಾರೆ. ಇದಕ್ಕೆ ಕಾರಣವೆಂದರೆ ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ತಪ್ಪು ಲೆಕ್ಕಾಚಾರ, ಬದ್ಧತೆ ಮತ್ತು ಅದಕ್ಷತೆಗೆ ಸ್ಥಾನವಿಲ್ಲ. ಬ್ಲ್ಯಾಕ್ ಹೇಳುವಂತೆ ಆರ್ಥಿಕ ಅಭಿವೃದ್ಧಿಯಲ್ಲಿ ಸಾಮರ್ಥ್ಯ ವೃದ್ಧಿ, ಆರ್ಥಿಕ ಸಮಾನತೆ, ಸಾಮಾಜಿಕ ಅಭಿವೃದ್ಧಿ ಹಾಗೂ ಜನರ ಮನೋಭಾವದ ಬದಲಾವಣೆ, ಹಾಗೂ ಅಭಿವೃದ್ಧಿಗೆ ಮಾರಕವಾದ ಅಂಶಗಳ ನಿವಾರಣೆ ಮುಂತಾದವುಗಳು ಒಳಗೊಂಡಿವೆ. ಮೈರ್‌ಡಾಲ್ ಹೇಳುವಂತೆ ಆರ್ಥಿಕ ಅಭಿವೃದ್ಧಿ ಎಂದರೆ ಸಾಮಾಜಿಕ ಸ್ಥಿತಿಯು ಅಭಿವೃದ್ಧಿ ಹೊಂದುವುದು.

**ಉದ್ಯಮಿ ಎಂಬ ಶಬ್ದದ ಮೂಲ ಹಾಗೂ ತಾತ್ಪರ್ಯ**

ಉದ್ಯಮಿ ಎಂಬ ಶಬ್ದದ ಇಂಗ್ಲಿಷ್ ಮೂಲರೂಪ ಆಂತ್ರೆಪ್ರೆನ್ಯೂರ್ ಶಬ್ದದ ಉದ್ಭವವು ಸುಮಾರು ಹನ್ನೆರಡನೇ ಶತಮಾನದಷ್ಟು ಹಳೆಯದು. ಆದರೆ ಈ ಶಬ್ದವು ಹದಿನೇಳನೇ ಶತಮಾನದಷ್ಟು ಇತ್ತೀಚೆಗಷ್ಟೇ ಫ್ರಾನ್ಸಿನ ಸೈನ್ಯದಲ್ಲಿ ಬಳಸಲ್ಪಡಲು ಆರಂಭವಾಯಿತು. ಈ ಶಬ್ದವು ಫ್ರೆಂಚ್ ಭಾಷೆಯ ಎಂತ್ರೆಪ್ರೆಂದ್ರೆ ಅರ್ಥಾತ್ ಯಾವುದೇ ಕೆಲಸವನ್ನು ಕೈಗೊಳ್ಳುವುದು ಎಂಬ ಶಬ್ದದಿಂದ ಬಂದಿದೆ. ಕ್ರಮೇಣ ಈ ಶಬ್ದವು ಸೈನ್ಯದ ದಂಡಯಾತ್ರೆಗಳಿಂದ ಹಿಡಿದು ಸೇತುವೆ, ಬಂದರುಗಳ ನಿರ್ಮಾಣದಂತಹ ಲೋಕೋಪಯೋಗಿ ಕೆಲಸಗಳನ್ನು ಕೈಗೊಳ್ಳುವವನ ವರೆಗೆ ಅಲ್ಲಿಂದ ಸಾರ್ವಜನಿಕ ಸಂಗೀತ ಕಾರ್ಯಕ್ರಮಗಳ ನಿರ್ದೇಶಕನಿಗೆ ಬಳಸಲ್ಪಡಲು ಆರಂಭವಾಯಿತು. ಬಹಳಷ್ಟು ಸಮಯ ಆಂತ್ರೆಪ್ರೆನ್ಯೂರ್ ಎಂಬ ಶಬ್ದಕ್ಕೆ ಇಂಗ್ಲಿಷ್ ಭಾಷೆಯಲ್ಲಿ ಸಮಾನಾರ್ಥಕ ಪದವಿರಲಿಲ್ಲ.

**ಉದ್ಯಮಶೀಲತೆ: ಒಂದು ಬಹುಮುಖಿ ಕ್ಷೇತ್ರಗಳ ಕಲ್ಪನೆ**

ಮನುಷ್ಯನ ಚಟುವಟಿಕೆಗಳಿಂದ ಆರ್ಥಿಕ ಅಭಿವೃದ್ಧಿ ಉಂಟಾಗುತ್ತದೆ. ಈ ಪ್ರಕ್ರಿಯೆಯ ಕೇಂದ್ರ ಬಿಂದು ಮನುಷ್ಯ; ಆತನು ಸಮುದಾಯದ ಸಂಪನ್ಮೂಲಗಳ ವ್ಯವಸ್ಥಾಪಕನಾಗಿರಬಹುದು, ಕಾರ್ಮಿಕನಾಗಿರಬಹುದು, ಅಥವಾ ಅವುಗಳನ್ನು ಉಪಯೋಗಿಸುವ ಬಳಕೆದಾರನಾಗಿರಬಹುದು. ಆತನ ಕಾರ್ಯಚಟುವಟಿಕೆಗಳ ಅಂತಿಮ ಫಲಿತಾಂಶವು ವ್ಯವಸ್ಥಾಪಕನ ಪಾತ್ರವನ್ನು ಅವಲಂಬಿಸಿರುತ್ತದೆ. ಸಮಾಜದ ಉದ್ಯಮಶೀಲತೆಯ ಕೌಶಲಗಳು ಮತ್ತು ಸಾಮರ್ಥ್ಯಗಳನ್ನು ಪರಿಣಾಮಕಾರಿಯಾಗಿ ಬಳಸದೇ ಇದ್ದರೆ ಆರ್ಥಿಕ ಅಭಿವೃದ್ಧಿಯು ಕುಂಠಿತವಾಗುತ್ತದೆ. ಆದರೆ ಅವುಗಳ ಸ್ವರೂಪ ಹಾಗೂ ಪ್ರಮಾಣ ಆ ಸಮಾಜದಲ್ಲಿ ಎದುರಾಗುವ ಸವಾಲುಗಳು ಹಾಗೂ ಸನ್ನಿವೇಶಗಳನ್ನು ಅವಲಂಬಿಸಿರುತ್ತದೆ.

ಉದ್ಯಮಶೀಲತೆಯ ಕೊರತೆಯು ಅಭಿವೃದ್ಧಿಶೀಲ ದೇಶಗಳು ಎದುರಿಸುತ್ತಿರುವ ಗಂಭೀರ ಸಮಸ್ಯೆಯಾಗಿದ್ದು ಆರ್ಥಿಕ ಅಭಿವೃದ್ಧಿಯ ಹಿನ್ನಡೆಗೆ ಪ್ರಮುಖ ಕಾರಣವಾಗಿದೆ. ಆದರೆ ಮನುಕುಲದ ಅಭಿವೃದ್ಧಿಯಲ್ಲಿ ಉದ್ಯಮಶೀಲತೆ ಪ್ರಮುಖ ಪಾತ್ರ ವಹಿಸುತ್ತದೆ ಎಂಬ ಅಂಶವನ್ನು ಸಮಾಜವು ಇತ್ತೀಚೆಗಷ್ಟೆ ಮನಗಂಡಿದೆ. ಉದ್ಯಮಶೀಲತೆಯು ಕೆಲವೇ ಕೆಲವು ಜನರ ಖಾಸಗಿ ಉದ್ಯಮಕ್ಕೆ ಅನ್ವಯಿಸದೇ ದೀರ್ಘಕಾಲೀನ ಆರ್ಥಿಕ ಪರಿಣಾಮ ಬೀರುವ ಪ್ರಕ್ರಿಯೆಯಾಗಿದೆ.

ಸಮಾಜ ಶಾಸ್ತ್ರಜ್ಞರ ಪ್ರಕಾರ ಉದ್ಯಮಶೀಲತೆಯು ಆರ್ಥಿಕ ಅಭಿವೃದ್ಧಿಯ ಗತಿಯನ್ನು ನಿರ್ಧರಿಸುವ ವೇಗವರ್ಧಕವಾಗಿದೆ. ಒಂದು ಅಭಿವೃದ್ಧಿಶೀಲ ದೇಶದ ಆರ್ಥಿಕ ಅಭಿವೃದ್ಧಿಗೆ ಹೊಸ ಅವಕಾಶಗಳನ್ನು ಶೋಧಿಸಿ ಅವುಗಳನ್ನು ಸಮರ್ಥವಾಗಿ ಬಳಸಿಕೊಳ್ಳುವ ಸಾಹಸ ಪ್ರವೃತ್ತಿಯುಳ್ಳ ಉದ್ಯಮಿಗಳ ಅವಶ್ಯಕತೆಯಿದೆ. ಆರ್ಥಿಕ ಅಭಿವೃದ್ಧಿಯು ಮನುಷ್ಯನ ಉದ್ದೇಶಪೂರ್ವಕ ಚಟುವಟಿಕೆಗಳ ಫಲಶ್ರುತಿಯಾಗಿರುವುದರಿಂದ ಉದ್ಯಮಶೀಲತೆಯು ಸಮಾಜದ ಮೇಲೆ ಸಕಾರಾತ್ಮಕ ಪರಿಣಾಮ ಬೀರುವುದಷ್ಟೇ ಅಲ್ಲದೆ ಉತ್ಸಾಹ, ಎಡೆಬಿಡದ ಪ್ರಯತ್ನ ಮತ್ತು ಹೊಸ ಅವಕಾಶಗಳನ್ನು ಕಂಡು ಹಿಡಿಯುವ ಪ್ರವೃತ್ತಿಗೆ ಕಾರಣವಾಗುತ್ತದೆ.

ಉದ್ಯಮಶೀಲತೆ ಹಾಗೂ ಆರ್ಥಿಕ ಅಭಿವೃದ್ಧಿಯ ನಡುವಿನ ಸಂಬಂಧದ ಮಿರ್ಡಾಲ್ (1968) ಹೇಳುವುದೇನೆಂದರೆ ಉದ್ಯಮಶೀಲತೆಯ ಕೊರತೆ ಮತ್ತು ದುಡಿಯುವ ಬಗ್ಗೆ ಇರುವ ಅಸಡ್ಡೆಯು ಆರ್ಥಿಕ ಹಿನ್ನಡೆಗೆ ಕಾರಣವಾಗುತ್ತದೆ. ಆದುದರಿಂದ ಉದ್ಯಮಶೀಲತೆಯು ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿ ಉತ್ಪಾದನೆಯ ಮೇಲೆ ಪರಿಣಾಮ ಬೀರುವ ನಾಲ್ಕನೇ ಸ್ತಂಭವಾಗಿ ಹೊರಹೊಮ್ಮಿದೆ. ಉದ್ಯಮಶೀಲತೆಯು ಇತರೆಲ್ಲವನ್ನು ಹಿಂದಿಕ್ಕಲು ಪ್ರಮುಖ ಕಾರಣವೆಂದರೆ ಅದು ಒಂದು ಚಟುವಟಿಕೆಯಿಂದ ಕೂಡಿದ ಪ್ರಕ್ರಿಯೆಯಾಗಿದೆ. ಗ್ರಿಫಿನ್ ಹೇಳುವಂತೆ "ಉದ್ಯಮಶೀಲತೆಯು ವಾಹನದ ಇಂಜಿನಿನಲ್ಲಿ ಉತ್ಪತ್ತಿಯಾಗುವ ಕಿಡಿಯಾಗಿದೆ."

ಮಿಯರ್ ಹೇಳುವಂತೆ ಇತರರು ಬಿಟ್ಟು ಬಿಟ್ಟ ಅವಕಾಶಗಳನ್ನು ಸದುಪಯೋಗಪಡಿಸುವುದು ಉದ್ಯಮಶೀಲತೆಯ ವಿಶೇಷತೆಯಾಗಿದೆ. ನಾರಾಯಣ್ ಪ್ರಕಾರ ಉದ್ಯಮಶೀಲತೆಯು ಮೂರು ಕಾರಣಗಳಿಂದಾಗಿ ಪ್ರಾಮುಖ್ಯ ಪಡೆಯುತ್ತದೆ: ಉದ್ಯಮಶೀಲತೆಗೆ ಸಂಬಂಧಿಸಿದ ಅಂಶಗಳನ್ನು ಒಬ್ಬ ಉದ್ಯಮಿಯು ಕಾರ್ಯರೂಪಕ್ಕೆ ತರುವವರೆಗೆ ಅವು ನಿಷ್ಪ್ರಯೋಜಕವಾಗಿರುತ್ತವೆ; ಇತರ ಅಂಶಗಳಲ್ಲಿರುವ ಕೊರತೆಯನ್ನು ಉದ್ಯಮಶೀಲತೆಯು ಸರಿದೂಗಿಸುತ್ತದೆ; ಮತ್ತು ರಾಷ್ಟ್ರಗಳ ಏಳಿಗೆ ಮತ್ತು ಅಧೋಗತಿ ಉದ್ಯಮಶೀಲತೆಯ ಉನ್ನತಿ ಹಾಗೂ ಅಧೋಗತಿಯನ್ನು ಅವಲಂಬಿಸಿದೆ. ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಿಗಳು ಪ್ರಮುಖ ಪಾತ್ರ ವಹಿಸುವುದರಿಂದ ಉದ್ಯಮಿಯನ್ನು ಉತ್ಪಾದನೆಯ ನಾಲ್ಕನೇ ಸ್ತಂಭ ಎನ್ನಬಹುದು.

**ಉದ್ಯಮಶೀಲತೆಯ ವಿಕಾಸ**

ಬಹಳಷ್ಟು ಸಮಯ ಉದ್ಯಮಶೀಲತೆಯು ಒಂದು ನೈಸರ್ಗಿಕ ಪ್ರಕ್ರಿಯೆ ಎಂದು ನಂಬಲಾಗಿತ್ತು. ಆದರೆ ಈಗ ಉದ್ಯಮಶೀಲತೆಯನ್ನು ಅಭಿವೃದ್ಧಿಪಡಿಸಬೇಕು ಅಥವಾ ಅದು ವಿಕಸಿತವಾಗಬೇಕು ಎಂದು ಹೇಳಲಾಗುತ್ತದೆ. ಉದ್ಯಮಶೀಲತೆಯನ್ನು ಅಭಿವೃದ್ಧಿಪಡಿಸುವ ಸಂಸ್ಥೆಗಳ ಸಹಾಯದಿಂದ ಉದ್ಯಮಶೀಲತೆಯನ್ನು ಬೆಳೆಸುವುದನ್ನು ಉದ್ಯಮಶೀಲತೆಯ ವಿಕಾಸ ಎನ್ನಲಾಗುತ್ತದೆ. ನಮ್ಮ ದೇಶದಲ್ಲಿ ಈ ಪ್ರಕ್ರಿಯೆಯನ್ನು ಅರ್ವತ್ತರ ದಶಕದಲ್ಲಿ ಕೈಗಾರಿಕೀಕರಣಕ್ಕೆ ಪ್ರಾಮುಖ್ಯ ನೀಡುವ ಮೂಲಕ ಆರಂಭಿಸಲಾಯಿತು. ಎಪ್ಪತ್ತರ ದಶಕದಲ್ಲಿ ಉದ್ಯಮಶೀಲತೆಯ ವಿಕಸನಕ್ಕೆ ವ್ಯವಸ್ಥಿತ ಪ್ರಯತ್ನಗಳನ್ನು ಮಾಡಲಾಯಿತು. ಉದ್ಯಮಶೀಲತೆಯನ್ನು ಬೆಳೆಸುವ ಪ್ರಕ್ರಿಯೆಯನ್ನು ಮೊದಲು ಆರಂಭಿಸಿದ ರಾಜ್ಯವೆಂದರೆ ಗುಜರಾತ್. ತದನಂತರ ಆಂಧ್ರಪ್ರದೇಶ, ಕರ್ನಾಟಕ, ತಮಿಳ್ನಾಡು ಮುಂತಾದ ರಾಜ್ಯಗಳು ಈ ಪ್ರಕ್ರಿಯೆಯನ್ನು ಆರಂಭಿಸಿದವು. ಈಶಾನ್ಯ ರಾಜ್ಯಗಳಲ್ಲಿ ಎಪ್ಪತ್ತರ ದಶಕದಲ್ಲಿ ಉದ್ಯಮಶೀಲತೆಯನ್ನು ಬೆಳೆಸುವ ಪ್ರಕ್ರಿಯೆಯನ್ನು ಮೊದಲು ಆರಂಭಿಸಿದ ಹೆಗ್ಗಳಿಕೆ ಅಸ್ಸಾಂ ರಾಜ್ಯಕ್ಕೆ ಸಲ್ಲುತ್ತದೆ. ಕ್ಷಿಪ್ರ ಕೈಗಾರಿಕೀಕರಣ ಹಾಗೂ ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ನಮ್ಮ ದೇಶ ಕಂಡುಕೊಂಡ ದಾರಿಯೆಂದರೆ ಉದ್ಯಮಶೀಲತೆಯ ಬೆಳವಣಿಗೆ ಅಥವಾ ಉದ್ಯಮಗಳ ಸ್ಥಾಪನೆ. ಈಗ ಔದ್ಯಮೀಕರಣವು ರಾಷ್ಟ್ರವ್ಯಾಪಿಯಾಗಿದೆ.

ಸ್ವಉದ್ಯಮ ನಡೆಸುವವರ ಸಂಖ್ಯೆ ಬಹಳಷ್ಟು ಕಡಿಮೆಯಾಗಿರುವುದರಿಂದ ಉದ್ಯಮಗಳ ಸ್ಥಾಪನೆಗೆ ಪ್ರಾಮುಖ್ಯ ನೀಡುವುದು ಅಗತ್ಯವಾಗಿದೆ. ಸ್ವಾತಂತ್ರ್ಯೋತ್ತರದ ಮೊದಲ ಐದು ದಶಕಗಳಲ್ಲಿ ಸಮಾಜವಾದಿ ಮೌಲ್ಯಗಳಿಗೆ ಹಾಗೂ ಸಾರ್ವಜನಿಕ ಕ್ಷೇತ್ರದ ಉದ್ಯಮಗಳಿಗೆ ಆದ್ಯತೆ ನೀಡಿದ್ದರಿಂದ ಆರ್ಥಿಕ ಅಭಿವೃದ್ಧಿ ಸೀಮಿತವಾಗಿತ್ತು. ಉದಾರೀಕರಣವು ಉದ್ಯಮಶೀಲತೆ ಹಾಗೂ ಔದ್ಯಮೀಕರಣದ ಬಾಗಿಲುಗಳನ್ನು ಸಾರ್ವಜನಿಕರಿಗೆ ತೆರೆದಿದೆ. ಈ ಹಿನ್ನೆಲೆಯಲ್ಲಿ ಉದ್ಯಮಶೀಲತೆಯನ್ನು ಬೆಳೆಸಿಕೊಳ್ಳುವುದು ಹಿಂದೆಂದಿಗಿಂತಲೂ ಪ್ರಸ್ತುತವಾಗಿದೆ.

**ಉದ್ಯಮಶೀಲತೆಯನ್ನು ಬೆಳೆಸುವ ಕಾರ್ಯಕ್ರಮಗಳು**

ಉದ್ಯಮಶೀಲತೆಯನ್ನು ಬೆಳೆಸುವ ಕಾರ್ಯಕ್ರಮಗಳೆಂದರೆ ಉದ್ಯಮಶೀಲತೆಯ ಬಗ್ಗೆ ಅರಿವು ಮೂಡಿಸುವ; ಉದ್ಯಮ

ಸ್ಥಾಪನೆಯ ಬಗ್ಗೆ ತರಬೇತಿ ನೀಡುವ; ಉದ್ಯಮ ಸ್ಥಾಪಿಸಲು ಆಸಕ್ತಿ ಇರುವವರಿಗೆ ತರಬೇತಿ ನೀಡುವ; ಸ್ವಉದ್ಯಮಕ್ಕೆ ಪ್ರೋತ್ಸಾಹ ನೀಡುವ; ಈಗಾಗಲೇ ಉದ್ಯಮ ನಡೆಸುತ್ತಿರುವವರಿಗೆ ಹೆಚ್ಚುವರಿ ತರಬೇತಿ ನೀಡುವ; ಮತ್ತು ಸಮಾಜದಲ್ಲಿ ಉದ್ಯಮಶೀಲತೆಯ ಮೌಲ್ಯಗಳನ್ನು ಬಿತ್ತುವ ತರಬೇತಿ ನೀಡುವ ಕಾರ್ಯಕ್ರಮಗಳಾಗಿವೆ. ಉದ್ಯಮಶೀಲತೆಯನ್ನು ಬೆಳೆಸುವ ಕಾರ್ಯಕ್ರಮಗಳನ್ನು 1970 ರಲ್ಲಿ ಗುಜರಾತ್ ಸರಕಾರವು ಗುಜರಾತ್ ಇಂಡಸ್ಟ್ರಿಯಲ್ ಇನ್ವೆಸ್ಟ್‌ಮೆಂಟ್ ಕಾರ್ಪೊರೇಶನ್‌ನ ಪ್ರಾಯೋಜಕತ್ವದಲ್ಲಿ ಆರಂಭಿಸಿತು. ಈ ಕಾರ್ಯಕ್ರಮವು ಆಂಧ್ರಪ್ರದೇಶದ ಕಾಕಿನಾಡ ಜಿಲ್ಲೆಯಲ್ಲಿ ಮೆಕ್‌ಕ್ಲೀಲ್ಯಾಂಡ್ ನಡೆಸಿದ ಪ್ರಯೋಗಗಳನ್ನು ಆಧರಿಸಿತ್ತು.

ಉದ್ಯಮಶೀಲತೆಯನ್ನು ಬೆಳೆಸುವ ಕಾರ್ಯಕ್ರಮಗಳನ್ನು ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವ ಮೂಲಕ ಯಶಸ್ವಿಯಾಗಿ ಉದ್ಯಮ ನಡೆಸುವ ಕೌಶಲ್ಯವನ್ನು ಬೆಳೆಸುವ ಸಲುವಾಗಿ ವಿನ್ಯಾಸಗೊಳಿಸಲಾಗುತ್ತದೆ. ಉದ್ಯಮ ಸ್ಥಾಪಿಸಲು ಆಸಕ್ತರಾಗಿರುವವರಿಗೆ ಅಗತ್ಯವಿರುವ ಆರ್ಥಿಕ, ತಾಂತ್ರಿಕ ಹಾಗೂ ಉದ್ಯಮ ನಿರ್ವಹಣೆಗೆ ಸಂಬಂಧಿಸಿದ ಮಾಹಿತಿ ಒದಗಿಸುವುದು ಈ ಕಾರ್ಯಕ್ರಮಗಳ ಉದ್ದೇಶವಾಗಿದೆ. ಆದುದರಿಂದ ತರಬೇತಿ ನೀಡಿ ಉದ್ಯಮಶೀಲತೆಯನ್ನು ಬೆಳೆಸುವುದು ಹಲವು ಉದ್ದೇಶಗಳನ್ನು ಗುರಿ ಮುಟ್ಟಿಸುವ ವಿಧಾನವಾಗಿದೆ. ಜೋಶಿ ಮತ್ತು ಓಝಾ ಪ್ರಕಾರ ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ ಉದ್ಯಮಶೀಲತೆಯನ್ನು ಬೆಳೆಸುವುದು ಮತ್ತು ಇವುಗಳು ದೇಶದಾದ್ಯಂತ ಹರಡುವಂತೆ ಮಾಡುವುದು; ವೈಜ್ಞಾನಿಕ ಮತ್ತು ತಾಂತ್ರಿಕ ಸೌಲಭ್ಯಗಳ ಸಮರ್ಪಕ ಬಳಕೆ; ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಯೇತರ ಚಟುವಟಿಕೆಗಳಿಗೆ ಪ್ರಾಶಸ್ತ್ಯ ನೀಡಿ ಆ ಪ್ರದೇಶಗಳ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಪಡಿಸುವುದು; ಉದ್ಯೋಗಾವಕಾಶಗಳ ಸ್ಥಾಪನೆ; ಮತ್ತು ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ ಸ್ಥಾಪನೆ.

ಭಾರತದಲ್ಲಿ ಉದ್ಯಮಶೀಲತೆಯನ್ನು ಬೆಳೆಸುವ ಕಾರ್ಯಕ್ರಮಗಳನ್ನು ಇಂಟೆಗ್ರೇಟಡ್ ರೂರಲ್ ಡೆವೆಲಪ್‌ಮೆಂಟ್ ಪ್ರೊಗ್ರಾಮ್, ಟ್ರೈನಿಂಗ್ ಆಫ್ ರೂರಲ್ ಯೂತ್ ಫಾರ್ ಸೆಲ್ಫ್ ಎಂಪ್ಲಾಯ್‌ಮೆಂಟ್, ಪ್ರಧಾನ್ ಮಂತ್ರಿ ರೋಝ್‌ಗಾರ್ ಯೋಜನಾ ಹಾಗೂ ಅಂತರ್ರಾಷ್ಟ್ರೀಯ ಕಾರ್ಯಕ್ರಮಗಳ ಮೂಲಕ ನಡೆಸಲಾಗುತ್ತದೆ. ಈ ಅಂತರ್ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ವಿಶ್ವ ಬ್ಯಾಂಕ್ ಪ್ರಾಯೋಜಿತ ಸಣ್ಣ ಉದ್ಯಮ ಸ್ಥಾಪನೆ, ಫೋರ್ಡ್ ಫೌಂಡೇಶನ್‌ನ ಜೀವನೋಪಾಯ, ಉದ್ಯೋಗಾವಕಾಶ ಹಾಗೂ ಆದಾಯ ಹೆಚ್ಚಳುಸ್ವ ಕಾರ್ಯಕ್ರಮಗಳು ಅಂತರ್ರಾಷ್ಟ್ರಿಯ ಕಾರ್ಮಿಕ ಸಂಘಟನೆಯ ಅಸಂಘಟಿತ ಕ್ಷೇತ್ರಗಳಿಗೆ ಸಹಾಯ ಹಾಗೂ ಯುನೈಟೆಡ್ ಸ್ಟೇಟ್ಸ್ ಏಜೆನ್ಸಿ ಫಾರ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ ಅನ್ವಯ ಕಾರ್ಯಗತಗೊಳಿಸುವ ಅತೀ ಸಣ್ಣ ಉದ್ಯಮಗಳಿಗೆ ಪ್ರೋತ್ಸಾಹ ನೀಡುವುದು ಒಳಗೊಂಡಿವೆ.

**ತರಬೇತಿಯ ಅವಶ್ಯಕತೆ**

ಯಾವುದೇ ಚಟುವಟಿಕೆಯಿಂದ ಉತ್ತಮ ಫಲಿತಾಂಶ ದೊರೆಯಬೇಕಾದರೆ ಆ ಚಟುವಟಿಕೆಯ ಬಗ್ಗೆ ತರಬೇತಿ ಪಡೆದಿರುವುದು ಅತ್ಯವಶ್ಯಕ. ಸಮರ್ಥ ಉದ್ಯಮಿಗಳನ್ನು ತರಬೇತು ಮಾಡುವುದು, ತಮ್ಮ ಉದ್ಯಮವನ್ನು ಸಮರ್ಥವಾಗಿ ನಡೆಸುವ ಕೌಶಲ್ಯವನ್ನು ಬೆಳೆಸುವುದು ಮತ್ತು ಈ ಮೂಲಕ ಆರ್ಥಿಕ ಅಭಿವೃದ್ಧಿ ಹೊಂದುವುದು ತರಬೇತಿಯ ಮೂಲ ಉದ್ದೇಶ. ಹಿಂದೆ, ಉದ್ಯಮಿಗಳು ತಾವಾಗಿಯೇ ಉದ್ಯಮಗಳನ್ನು ಹುಟ್ಟು ಹಾಕುತ್ತಾರೆ ಎಂಬ ದೃಷ್ಟಿಕೋನದಿಂದಾಗಿ ಉದ್ಯಮಶೀಲತೆಯ ಅಭಿವೃದ್ಧಿಯು ಭೌತಿಕ ಹಾಗೂ ಆರ್ಥಿಕ ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗಿತ್ತು. ಆದರೆ ಉದ್ಯಮಶೀಲತೆಗೆ ಭೌತಿಕ ಹಾಗೂ ಆರ್ಥಿಕ ಕ್ಷೇತ್ರದ ಅಭಿವೃದ್ಧಿಗಿಂತ ದೂರದೃಷ್ಟಿ ಹಾಗೂ ಉದ್ಯಮ ನಿರ್ವಹಣೆಯ ಸಾಮರ್ಥ್ಯ ಮಹತ್ತರ ಪಾತ್ರವನ್ನು ವಹಿಸುತ್ತವೆ. ಅರ್ಥಾತ್ ಉದ್ಯಮಿಯ ಸಾಮರ್ಥ್ಯವು ಆತ ಉದ್ಯಮವನ್ನು ಹೇಗೆ ನಿರ್ವಹಿಸುತ್ತಾನೆ ಎಂಬುದನ್ನು ನಿರ್ಧರಿಸುತ್ತದೆ. ಉದ್ಯಮಿಯ ವ್ಯಕ್ತಿತ್ವವು ತನ್ನ ಉದ್ಯಮವನ್ನು ವಿಸ್ತರಿಸುವ ಉತ್ಕಟೇಚ್ಛೆ, ಉದ್ಯಮವನ್ನು ಸಮರ್ಥವಾಗಿ ನಡೆಸುವುದು, ಹಾಗೂ ಈ ಹಾದಿಯಲ್ಲಿ ಎದುರಾಗುವ ಅಡೆತಡೆಗಳನ್ನು ನಿಭಾಯಿಸುವ ಕೌಶಲ್ಯದ ಮೇಲೆ ಪ್ರಭಾವ ಬೀರುತ್ತದೆ. ಆತನು ಸ್ವಯಂ ಪ್ರೇರಣೆಯಿಂದ ಈ ಗುಣಲಕ್ಷಣಗಳನ್ನು ತೋರ್ಪಡಿಸಬೇಕು. ಈ ಅಂಶಗಳನ್ನು ಗಮನಿಸುವಾಗ ತರಬೇತಿಯ ಅವಶ್ಯಕತೆಯು ಸ್ಪಷ್ಟವಾಗುತ್ತದೆ.

**ಉದ್ಯಮಶೀಲತೆಯನ್ನು ಬೆಳೆಸುವ ಕಾರ್ಯಕ್ರಮಗಳ ಹಂತಗಳು**

ಉದ್ಯಮಶೀಲತೆಯನ್ನು ಬೆಳೆಸುವ ಅಥವಾ ಉದ್ಯಮಶೀಲತೆಯ ವಿಕಸನದಲ್ಲಿ ತರಬೇತಿ ಪೂರ್ವ ಹಂತ, ತರಬೇತಿಯ ಹಂತ ಹಾಗೂ ತರಬೇತಿಯ ನಂತರದ ಹಂತ ಅಥವಾ ಪುನರಾವಲೋಕನ ಹಂತ ಎಂಬ ಮೂರು ಹಂತಗಳಿವೆ. ಈ ಕಾರ್ಯಕ್ರಮವು ಸಾಮಾನ್ಯವಾಗಿ ಎರಡರಿಂದ ಮೂರು ವಾರಗಳ ಅವಧಿಯದ್ದಾಗಿರುತ್ತದೆ. ಈ ಕಾರ್ಯಕ್ರಮಗಳು ಅದರಲ್ಲಿ ಭಾಗವಹಿಸುವವರ ಅವಶ್ಯಕತೆಗಳಿಗೆ ಅನುಗುಣವಾಗಿ ವಿನ್ಯಾಸಗೊಳಿಸಲ್ಪಟ್ಟಿರುತ್ತವೆ. ಈ ಕಾರ್ಯಕ್ರಮಗಳು ಉದ್ಯಮವು ಕಾರ್ಯಚರಿಸಬೇಕಾದ ಪರಿಸರದ ಆರ್ಥಿಕ ಸ್ಥಿತಿ ಹಾಗೂ ಸಾಮಾಜಿಕ ಅಡೆತಡೆಗಳನ್ನು ಮೆಟ್ಟಿ ನಿಲ್ಲುವ ವಿಧಾನಗಳ ಬಗ್ಗೆ ತರಬೇತಿ ನೀಡುತ್ತವೆ. ಉದ್ಯಮಶೀಲತೆಯ ವಿಕಸನದ ವಿವಿಧ ಹಂತಗಳನ್ನು ಕೆಳಗೆ ವಿವರಿಸಲಾಗಿದೆ:

**ತರಬೇತಿ ಪೂರ್ವ ಹಂತ:**

ಈ ಹಂತವನ್ನು ತಯಾರಿಯ ಹಂತ ಎನ್ನಬಹುದು. ಈ ಹಂತದಲ್ಲಿ ಒಬ್ಬ ವ್ಯಕ್ತಿಯು ಉದ್ಯಮಿಯಾಗಿ ಪರಿವರ್ತನೆಗೊಳ್ಳಲು ಅಗತ್ಯವಿರುವ ಪರಿಸ್ಥಿತಿಗಳನ್ನು ಅರ್ಥೈಸಲಾಗುತ್ತದೆ. ಈ ಪರಿಸ್ಥಿತಿಯ ವಿಶ್ಲೇಷಣೆಯಿಂದ ಉದ್ಯಮಿಯು ತನ್ನ ಗುರಿ ತಲುಪಲು ಬೇಕಾಗುವ ದೂರದೃಷ್ಟಿಯನ್ನು ಬೆಳೆಸಬಹುದು. ತರಬೇತಿ ಸಂಸ್ಥೆಗಳು ವಿವಿಧ ತರಬೇತಿ ಕಾರ್ಯಕ್ರಮಗಳಿಗೆ ಸಿದ್ಧತೆ ನಡೆಸಬೇಕಾಗುತ್ತದೆ. ತರಬೇತಿ ಕಾರ್ಯಕ್ರಮದಲ್ಲಿ ಒಳಗೊಂಡಿರುವ ಅಂಶಗಳೆಂದರೆ: ನಿರ್ದಿಷ್ಟ ಪ್ರದೇಶದಲ್ಲಿ ಉದ್ಯಮಕ್ಕೆ ಇರುವ ಅವಕಾಶಗಳ ಬಗ್ಗೆ ಮಾಹಿತಿ ಸಂಗ್ರಹಿಸಿಡುವುದು; ಉದ್ಯಮ ನಡೆಸಲು ಆಸಕ್ತರಾಗಿರುವವರ ಪಟ್ಟಿ ತಯಾರಿಸುವುದು; ಉದ್ಯಮ ನಡೆಸಲು ಇಚ್ಛಿಸುವವರನ್ನು ಪತ್ತೆ ಹಚ್ಚಿ ಅವರನ್ನು ಪ್ರೋತ್ಸಾಹಿಸುವುದು; ತರಬೇತಿಯ ವಿಷಯವನ್ನು ಆಯ್ಕೆ ಮಾಡುವುದು; ಅಡೆತಡೆಗಳನ್ನು ಎದುರಿಸಲು ಸನ್ನದ್ಧವಾಗಿರುವುದು; ತನ್ನ ಬಗ್ಗೆ ಸಕಾರಾತ್ಮಕ ಮನೋಭಾವ ಹೊಂದಿರುವುದು; ಸಮಸ್ಯೆಗಳು ಎದುರಾದಾಗ ಅವುಗಳನ್ನು ಹೇಗೆ ಎದುರಿಸುವುದು ಮತ್ತು ಉದ್ಯಮದ ಉದ್ದೇಶಗಳನ್ನು ರೂಪಿಸುವುದು.

**ತರಬೇತಿಯ ಹಂತ:**

ತರಬೇತಿ ಪಡೆಯುವವರಲ್ಲಿ ಬದಲಾವಣೆ ತರುವುದು ತರಬೇತಿಯ ಹಂತದ ಮೂಲ ಉದ್ದೇಶ. ಸಂಕ್ಷಿಪ್ತವಾಗಿ ಇದನ್ನು 'ಗುರಿಸಾಧನೆಯ ಅವಶ್ಯಕತೆ' ಎನ್ನಲಾಗುತ್ತದೆ, ಅರ್ಥಾತ್ ತರಬೇತಿ ಪಡೆಯುವವರನ್ನು ಪ್ರೇರೇಪಿಸುವುದು. ತರಬೇತಿ ಕಾರ್ಯಕ್ರಮದಲ್ಲಿ ಮೂರು ಭಾಗಗಳಿರುತ್ತವೆ: ಗುರಿ ಸಾಧಿಸಲು ಉತ್ತೇಜಿಸುವುದು; ಉದ್ಯಮದ ಅವಕಾಶಗಳ ಬಗ್ಗೆ ಮಾರ್ಗದರ್ಶನ; ಮತ್ತು ಉದ್ಯಮವನ್ನು ನಿಭಾಯಿಸುವ ಬಗ್ಗೆ ತಿಳುವಳಿಕೆ ನೀಡುವುದು.

**ಗುರಿ ಸಾಧಿಸಲು ಉತ್ತೇಜಿಸುವುದು:**
ಗುರಿ ಸಾಧಿಸಲು ಉತ್ತೇಜಿಸುವುದು ತರಬೇತಿ ಪಡೆಯುವವರಲ್ಲಿ ಸುಪ್ತಾವಸ್ಥೆಯಲ್ಲಿರುವ ಗುರಿಸಾಧನಾ ಸಾಮರ್ಥ್ಯವನ್ನು ಹೊರತರುವುದು. ಇದರಲ್ಲಿ ಮೆದುಳಿಗೆ ಕಸರತ್ತು ನೀಡುವ ಆಟಗಳು, ಗುರಿ ನಿಗದಿಪಡಿಸುವ ಆಟಗಳು ಮತ್ತು ಪಾತ್ರ ನಿರ್ವಹಣೆ ಒಳಗೊಂಡಿರುತ್ತವೆ. ತರಬೇತಿ ಪಡೆಯುವವರಿಗೆ ತಮ್ಮೊಳಗೆ ಸುಪ್ತವಾಗಿರುವ ಸಾಮರ್ಥ್ಯಗಳ ಪರಿಚಯ ಮಾಡಿ ಕೊಟ್ಟು ಅವರು ತಮ್ಮಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ಮಾಡಿಕೊಳ್ಳುವುದು ಈ ಚಟುವಟಿಕೆಗಳ ಉದ್ದೇಶ.

**ಉದ್ಯಮದ ಅವಕಾಶಗಳ ಬಗ್ಗೆ ಮಾರ್ಗದರ್ಶನ:**
ತರಬೇತಿಯಲ್ಲಿ ಭಾಗವಹಿಸುವವರಿಗೆ ಉದ್ಯಮ ಕ್ಷೇತ್ರದಲ್ಲಿ ಲಭ್ಯವಿರುವ ಅವಕಾಶಗಳ ಬಗ್ಗೆ ಮಾರ್ಗದರ್ಶನ ನೀಡಲಾಗುತ್ತದೆ. ತರಬೇತಿ ಪಡೆಯುವವರನ್ನು ಕೈಗಾರಿಕಾ ಪ್ರದೇಶಗಳಿಗೆ ಕರೆದುಕೊಂಡು ಹೋಗಿ ಉದ್ಯಮ ಕ್ಷೇತ್ರದ ಏಳುಬೀಳುಗಳ ಬಗ್ಗೆ ತಿಳುವಳಿಕೆ ನೀಡಲಾಗುತ್ತದೆ. ತಾವು ಆರಂಭಿಸಲು ಉದ್ದೇಶಿಸಿರುವ ಉದ್ಯಮಕ್ಕೆ ಮಾರುಕಟ್ಟೆಯಲ್ಲಿ ಇರುವ ಬೇಡಿಕೆಯ ಬಗ್ಗೆ ಸಮೀಕ್ಷೆ ನಡೆಸಲು ಅವಕಾಶ ನೀಡಲಾಗುತ್ತದೆ. ಉದ್ಯಮವನ್ನು ಆರಂಭಿಸುವ ಮೊದಲು ಮಾಡಬೇಕಾದ ಕೆಲಸಕಾರ್ಯಗಳ ಬಗ್ಗೆಯೂ ಮಾಹಿತಿ ನೀಡಲಾಗುತ್ತದೆ ಮಾತ್ರವಲ್ಲ ಸರಕಾರದ ನಿಯಮಾವಳಿಗಳ ಬಗ್ಗೆಯೂ ತಿಳುವಳಿಕೆ ನೀಡಲಾಗುತ್ತದೆ.

**ಉದ್ಯಮವನ್ನು ನಿಭಾಯಿಸುವ ಬಗ್ಗೆ ತಿಳುವಳಿಕೆ ನೀಡುವುದು:**
ಸಣ್ಣ ಉದ್ಯಮವನ್ನು ಉದ್ಯಮಿಯು ಸ್ವತಃ ನಿಭಾಯಿಸಬೇಕಾಗಿರುವುದರಿಂದ ಉದ್ಯಮವನ್ನು ನಿಭಾಯಿಸುವುದು ಹೇಗೆ ಎಂದು ತಿಳಿದುಕೊಳ್ಳುವುದು ಅಗತ್ಯ. ಇದರಿಂದ ಉದ್ಯಮ ನಿಭಾವಣೆಯ ಬಗ್ಗೆ ತಾನು ತಿಳಿದುಕೊಂಡದ್ದನ್ನು ವೃತ್ತಿ ಜೀವನದಲ್ಲಿ ಅಳವಡಿಸಲು ಸಾಧ್ಯವಾಗುತ್ತದೆ.

**ತರಬೇತಿಯ ನಂತರದ ಅಥವಾ ಪುನರಾವಲೋಕನ ಹಂತ:**
ತರಬೇತಿಯ ನಂತರದ ಅಥವಾ ಪುನರಾವಲೋಕನ ಹಂತವು ಪುನರಾವಲೋಕನ ಮಾಡಲು ಬೇಕಾದ ಸಹಾಯ ಒದಗಿಸುವುದು, ಮಾರ್ಗದರ್ಶನ ಮತ್ತು ಸಮಾಲೋಚನೆಯನ್ನು ಒಳಗೊಂಡಿದ್ದು ಈ ಹಂತದಲ್ಲಿ ಉದ್ಯಮ ಆರಂಭಿಸಲು ಸಾಲ ಪಡೆಯುವ ವಿಧಾನ, ಸಾಲದ ಅನುಮೋದನೆ, ಉದ್ಯಮ ಆರಂಭಿಸಲು ಸೂಕ್ತ ಸ್ಥಳವನ್ನು ಆರಿಸುವುದು, ಸರಕಾರದ ಪರವಾನಗಿ ಮತ್ತು ನೋಂದಣಿಗೆ ಸಂಬಂಧಿಸಿದ ಸಹಾಯವನ್ನು ಮಾಡಲಾಗುವುದು. ಪುನರಾವಲೋಕನ ಹಂತವು ಮೊದಲಿನ ಎರಡು ಹಂತಗಳಷ್ಟೇ ಪ್ರಮುಖವಾಗಿದೆ. ಹಣಕಾಸು ಸಂಸ್ಥೆಗಳು ಹಾಗೂ ಜಾಹೀರಾತು ಸಂಸ್ಥೆಗಳೊಡನೆ ವ್ಯವಹರಿಸುವಾಗ ಎದುರಾಗುವ ಸಮಸ್ಯೆಗಳ ಬಗ್ಗೆ ಉದ್ಯಮಿಗಳಿಗೆ ಅರಿವು ಮೂಡಿಸಿ ಅವುಗಳಿಗೆ ಪರಿಹಾರ ಹುಡುಕುವುದು ಪುನರಾವಲೋಕನ ಹಂತದ ಉದ್ದೇಶ. ಈ ಚಟುವಟಿಕೆಯು ಉದ್ಯಮಿಗಳಾಗಲು ಆಕಾಂಕ್ಷಿಸುವವರಿಗೆ ಉತ್ತೇಜನ ನೀಡುತ್ತದೆ. ಸಾಕಷ್ಟು ಪುನರಾವಲೋಕನ ಮಾಡದೇ ಇದ್ದರೆ ಉದ್ಯಮಿಗಳು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಂಡು ಉದ್ಯಮ ಸ್ಥಾಪಿಸುವ ಗುರಿಯಿಂದ ಹಿಂದೆ ಸರಿಯಬಹುದು.

**ಉದ್ಯಮಶೀಲತೆ ಬೆಳೆಸಲು ಸಹಾಯ ಮಾಡುವ ಸಂಸ್ಥೆಗಳು**
ಐದು ದಶಕಗಳ ಕಾಲ ಸರಕಾರವು ಉದ್ಯಮಿಗಳನ್ನು ಹುಟ್ಟು ಹಾಕಿ ತನ್ಮೂಲಕ ಆರ್ಥಿಕ ಅಭಿವೃದ್ಧಿಗೆ ನಾಂದಿ ಹಾಡಲು ಹಲವಾರು ಉಪಕ್ರಮಗಳನ್ನು ಕೈಗೊಂಡಿತ್ತು. ಸಣ್ಣ ಹಾಗೂ ಅತೀ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವುದು ಈ ಉಪಕ್ರಮಗಳ ಉದ್ದೇಶವಾಗಿತ್ತು. ಈ ಉದ್ದೇಶ ಸಾಧನೆಗೆ ಕೈಗೊಂಡ ಕಾರ್ಯವಿಧಾನದ ಉದ್ದೇಶವು ಜನಸಾಮಾನ್ಯರು ಆರ್ಥಿಕ ಸಮಾನತೆ ಹಾಗೂ ಸ್ವಾವಲಂಬನೆ ಹೊಂದುವುದು ಆಗಿತ್ತು. ಉದ್ಯಮಶೀಲತೆಯ ವಿಕಸನವನ್ನು ಮೂರು ಹಂತಗಳಲ್ಲಿ ಅನುಷ್ಠಾನಗೊಳಿಸಲಾಯಿತು: ರಾಷ್ಟ್ರೀಯ ಮಟ್ಟದ ಸಂಸ್ಥೆಗಳ ಮೂಲಕ, ರಾಜ್ಯ ಮಟ್ಟದ ಸಂಸ್ಥೆಗಳ ಮೂಲಕ, ಜಿಲ್ಲಾ ಮಟ್ಟದ ಸಂಸ್ಥೆಗಳ ಮೂಲಕ. ಇವುಗಳ ಜೊತೆ ಸರಕಾರೇತರ ಸಂಸ್ಥೆಗಳು ಸಹ ಕೈಜೋಡಿಸಿದ್ದವು. ಉದ್ಯಮಶೀಲತೆಯನ್ನು ಬೆಳೆಸುವ ಕಾರ್ಯಕ್ರಮಗಳನ್ನು ಕೈಗೊಳ್ಳುವಲ್ಲಿ ಮುಂಚೂಣಿಯಲ್ಲಿರುವ ಸಂಸ್ಥೆಗಳೆಂದರೆ ರೂರಲ್ ಡೆವಲಪ್‌ಮೆಂಟ್ ಆ್ಯಂಡ್ ಸೆಲ್ಫ್ ಎಂಪ್ಲಾಯ್‌ಮೆಂಟ್ ಟ್ರೈನಿಂಗ್ ಇನ್‌ಸ್ಟಿಟ್ಯುಟ್ (ರುಡ್ಸೆಟಿ) ಮತ್ತು ಮೈಸೂರಿನ ಮೈಸೂರ್ ಡಿಸ್ಟ್ರಿಕ್ಟ್ ಇಂಡಸ್ಟ್ರಿಸ್ ಸೆಂಟರ್ (ಎಮ್. ಡಿ. ಐ. ಸಿ).

**ರಾಷ್ಟ್ರೀಯ ಮಟ್ಟದ ಸಂಸ್ಥೆಗಳು:**
ರಾಷ್ಟ್ರೀಯ ಮಟ್ಟದಲ್ಲಿ ಉದ್ಯಮಶೀಲತೆಯನ್ನು ಬೆಳೆಸಲು ಸ್ಥಾಪಿಸಿರುವ ಸಂಸ್ಥೆಗಳೆಂದರೆ: ದ ಸ್ಮಾಲ್ ಇಂಡಸ್ಟ್ರಿ ಡೆವೆಲಪ್‌ಮೆಂಟ್ ಆರ್ಗನಿಸೇಶನ್ (ಎಸ್. ಐ. ಡಿ. ಒ.), ದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಸ್ಮಾಲ್ ಇಂಡಸ್ಟ್ರೀಸ್ ಎಕ್ಸ್‌ಟೆನ್ಶನ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ (ಎನ್. ಐ. ಎಸ್. ಐ. ಇ. ಟಿ.), ದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಆಂತ್ರೆಪ್ರೆನ್ಯೂರ್‌ಶಿಪ್ ಆ್ಯಂಡ್ ಸ್ಮಾಲ್ ಬಿಸಿನೆಸ್ ಡೆವೆಲಪ್‌ಮೆಂಟ್ (ಎನ್. ಐ. ಇ. ಎಸ್. ಬಿ. ಯು. ಡಿ.), ದ ನ್ಯಾಷನಲ್ ಆಂತ್ರೆಪ್ರೆನ್ಯೂರ್‌ಶಿಪ್ ಡೆವೆಲಪ್‌ಮೆಂಟ್ ಬೋರ್ಡ್ (ಎನ್. ಇ. ಡಿ. ಬಿ.), ದ ಖಾದಿ ಆ್ಯಂಡ್ ವಿಲೇಜ್ ಇಂಡಸ್ಟ್ರೀಸ್ ಕಮಿಶನ್ (ಕೆ. ವಿ. ಐ. ಸಿ.) ಮತ್ತು ದ ಆಂತ್ರೆಪ್ರೆನ್ಯೂರ್‌ಶಿಪ್ ಡೆವೆಲಪ್‌ಮೇಂಟ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಇ. ಡಿ. ಐ. ಐ.). ಈ ಸಂಸ್ಥೆಗಳ ಪಾತ್ರ ಹಾಗೂ ಅವುಗಳ ಕಾರ್ಯವನ್ನು ಕೆಳಗೆ ಸಂಕ್ಷಿಪ್ತವಾಗಿ ನೀಡಲಾಗಿದೆ.

**ಎಸ್. ಐ. ಡಿ. ಒ.:**
ಸಣ್ಣ ಉದ್ಯಮಗಳ ಅಭಿವೃದ್ಧಿಗೆ 1954ರಲ್ಲಿ ಕೇಂದ್ರ ಸರಕಾರವು ಕೈಗಾರಿಕಾ ಸಚಿವಾಲಯವು ಸ್ಮಾಲ್ ಇಂಡಸ್ಟ್ರೀಸ್ಡೆವೆಲಪ್‌ಮೆಂಟ್ ಆರ್ಗನೈಸೇಶನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿತು. ಈ ಸಂಸ್ಥೆಯು ಕಿರು ಕೈಗಾರಿಕೆಗಳನ್ನು ಆರಂಭಿಸಲು ಹಾಗೂ ಪ್ರೋತ್ಸಾಹಿಸಲು ಅಗತ್ಯವಿರುವ ರೂಪುರೇಷೆಗಳನ್ನು ರೂಪಿಸುವುದು ಹಾಗೂ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಜವಾಬ್ದಾರಿ ಹೊಂದಿದೆ. ಎಸ್. ಐ. ಡಿ. ಒ. ಹಾಗೂ ಅದರ ಅಂಗ ಸಂಸ್ಥೆಗಳು ಕಿರುಕೈಗಾರಿಕೆಗಳ ಸ್ಥಾಪನೆಗೆ ಅಗತ್ಯವಿರುವ ಸೇವೆಗಳನ್ನು ಒದಗಿಸುತ್ತವೆ. ಉದ್ಯಮ ಸ್ಥಾಪಿಸಲು ಬೇಕಾದ ತರಬೇತಿ, ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆಯ ಅಭಿವೃದ್ಧಿಯ ಸಂಸ್ಥೆಗಳಿಗೆ ಸಹಾಯ, ಉದ್ಯಮದ ರೂಪುರೇಷೆಗಳ ಸ್ಥೂಲ ವಿವರಣೆ, ಕಾರ್ಖಾನೆಯನ್ನು ನವೀಕರಣಗೊಳಿಸುವ ಬಗ್ಗೆ ಅಧ್ಯಯನ, ಕೈಗಾರಿಕೆಗಳ ಪರೀಕ್ಷೆಗೆ ಸಂಬಂಧಿಸಿದ ಸೇವೆಗಳು, ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವುದು ಮುಂತಾದ ಸೇವೆಗಳು ಎಸ್. ಐ. ಡಿ. ಒ. ನಿಂದ ದೊರೆಯುತ್ತವೆ. ಎಸ್. ಐ. ಡಿ. ಒ. ಇಪ್ಪತ್ತೆಂದು ಕಿರುಕೈಗಾರಿಕೆಗಳ ಸೇವಾ ಸಂಸ್ಥೆಗಳು, ಮೂವತ್ತಕ್ಕಿಂತಲೂ ಸೇವಾ ಸಂಸ್ಥೆಗಳ ಶಾಖೆಗಳು, ನಲ್ವತ್ತೊಂದು ವಿಸ್ತರಣಾ ಕೇಂದ್ರಗಳು, ನಾಲ್ಕು ಪ್ರಾಂತೀಯ ಪರೀಕ್ಷಾ ಕೇಂದ್ರಗಳು, ಒಂದು ಉತ್ಪನ್ನಗಳ ಅಭಿವೃದ್ಧಿ ಕೇಂದ್ರಗಳನ್ನು ತೆರೆದಿದೆ.

**ಎನ್. ಐ. ಎಸ್. ಐ. ಇ. ಟಿ.:**
ದ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಫಾರ್ ಸ್ಮಾಲ್ ಇಂಡಸ್ಟ್ರೀಸ್ ಎಕ್ಸ್‌ಟೆನ್ಶನ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್ ಉದ್ಯಮ ಸ್ಥಾಪಿಸಲು ಅಸಕ್ತರಾದವರಿಗೆ ತರಬೇತಿ ನೀಡುತ್ತದೆ. ಈಶಾನ್ಯ ರಾಜ್ಯಗಳ ಉದ್ಯಮಗಳ ಅಭಿವೃದ್ಧಿಗೆ ಅಸ್ಸಾಂ ರಾಜ್ಯದಲ್ಲಿ ಒಂದು ಉಪ ಕೇಂದ್ರವನ್ನು ತೆರೆಯಲಾಗಿದೆ. ಕಿರುಕೈಗಾರಿಕೆಗಳನ್ನು ನಡೆಸುವವರಿಗೆ ತಬಬೇತಿ ನೀಡುವುದು, ಕಿರು ಕೈಗಾರಿಕೆಗಳ ಸ್ಥಾಪನೆಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸುವುದು, ಮತ್ತು ಅಂತರ್‌ರಾಷ್ಟ್ರೀಯ ಮತ್ತಿತರ ಸಂಸ್ಥೆಗಳೊಡನೆ ತಾಂತ್ರಿಕ ಸಹಯೋಗದೊಂದಿಗೆ ಕಿರು ಕೈಗಾರಿಕೆಗಳ ಅಭಿವೃದ್ಧಿಗೆ ಶ್ರಮಿಸುವುದು ಈ ಸಂಸ್ಥೆಯ ಕಾರ್ಯವಾಗಿದೆ.

**ಎನ್. ಐ. ಇ. ಎಸ್. ಬಿ. ಯು. ಡಿ.:**
ವಿವಿಧ ಕೇಂದ್ರಗಳು ಹಾಗೂ ಸಂಸ್ಥೆಗಳ ತರಬೇತಿ ಕಾರ್ಯಕ್ರಮಗಳ ನಡುವೆ ಸಮನ್ವಯ ಸಾಧಿಸಲು, ತರಬೇತುದಾರರಿಗೆ ತರಬೇತಿ ನಿಡಲು ಹಾಗೂ ವಿವಿಧ ರೀತಿಯ ತರಬೇತಿ ಪಡೆಯುವವರಿಗೆ ಅನ್ವಯವಾಗುವ ಪಠ್ಯಕ್ರಮವನ್ನು ತಯಾರಿಸಲು ದ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಫಾರ್ ಆಂತ್ರೆಪ್ರೆನ್ಯೂರ್‌ಶಿಪ್ ಆ್ಯಂಡ್ ಸ್ಮಾಲ್ ಬಿಸಿನೆಸ್ ಡೆವಲಪ್‌ಮೆಂಟ್ ಸಂಸ್ಥೆಯನ್ನು 1984ರಲ್ಲಿ ಸ್ಥಾಪಿಸಲಾಯಿತು. ಈ ಸಂಸ್ಥೆಯ ಕಾರ್ಯಗಳು ಇಂತಿವೆ: ಉದ್ಯಮ ತರಬೇತಿಯ ಅತ್ಯುನ್ನತ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು, ತರಬೇತುದಾರರು ಹಾಗೂ ತರಬೇತಿ ಪಡೆಯಲಿಚ್ಛಿಸುವವರಿಗೆ ತರಬೇತಿ ನೀಡುವುದು, ದೇಶದ ವಿವಿಧ ಭಾಗಗಳಲ್ಲಿರುವ ತರಬೇತಿ ಸಂಸ್ಥೆಗಳ ನಡುವೆ ಸಮನ್ವಯ ಸಾಧಿಸುವುದು, ಉದ್ಯಮಶೀಲತೆಯ ತರಬೇತಿ ನೀಡುವ ಸಂಸ್ಥೆಗಳೊಡನೆ ಸಂಯೋಜನೆ, ಮತ್ತು ಉತ್ಸಾಹಿ ವ್ಯಕ್ತಿಗಳಿಗೆ ಸಣ್ಣ ಉದ್ಯಮಗಳನ್ನು ಸ್ಥಾಪಿಸಲು ಬೇಕಾಗುವ ತರಬೇತಿ ನೀಡುವುದು.

**ಎನ್. ಎಸ್. ಐ. ಸಿ.:**
ಸಣ್ಣ ಕೈಗಾರಿಕೆಗಳಿಗೆ ಯಂತ್ರೋಪಕರಣಗಳನ್ನು ಬಾಡಿಗೆಯ ಆಧಾರದ ಮೇಲೆ ನೀಡುವ ಹಾಗೂ ಸರಕಾರಿ ಸಂಸ್ಥೆಗಳಿಗೆ ಅವರ ಉತ್ಪನ್ನಗಳನ್ನು ಮಾರಲು ಸಾಧ್ಯವಾಗುವಂತೆ ಮಾಡುವ ಉದ್ದೇಶದಿಂದ ದ ನ್ಯಾಷನಲ್ ಸ್ಮಾಲ್ ಇಂಡಸ್ಟ್ರೀಸ್ ಕಾರ್ಪೊರೇಶನ್ ಎಂಬ ಸಂಸ್ಥೆಯನ್ನು 1955ರಲ್ಲಿ ಸ್ಥಾಪಿಸಲಾಯಿತು. ಈ ಸಂಸ್ಥೆಯ ಉದ್ದೇಶಗಳೆಂದರೆ ಸಣ್ಣ ಕೈಗಾರಿಕೆಗಳಿಗೆ ಅಗತ್ಯವಿರುವ ಸ್ವದೇಶಿ ಅಥವಾ ವಿದೇಶಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದಲ್ಲಿ ಒದಗಿಸುವುದು, ಈ ಉದ್ಯಮಗಳಿಗೆ ಕಚ್ಚಾ ಸಾಮಾಗ್ರಿಗಳನ್ನು ಒದಗಿಸುವುದು ಮತ್ತು ಕೇಂದ್ರ ಹಾಗೂ ರಾಜ್ಯ ಸರಕಾರದ ವಿವಿಧ ಇಲಾಖೆಗಳಿಂದ ಸಿದ್ಧ ಉತ್ಪನ್ನಗಳಿಗೆ ಬೇಡಿಕೆ ಒದಗಿಸುವುದು.

**ಎನ್. ಇ. ಡಿ. ಬಿ.:**
ದ ನ್ಯಾಷನಲ್ ಆಂತ್ರೆಪ್ರೆನ್ಯೂರ್‌ಶಿಪ್ ಡೆವೆಲಪ್‌ಮೆಂಟ್ ಬೋರ್ಡ್ ಸಂಸ್ಥೆಯು 1983ರಲ್ಲಿ ಸ್ಥಾಪಿಸಲ್ಪಟ್ಟಿದ್ದು ಕೈಗಾರಿಕಾ ಮಂತ್ರಿ ಅದರ ಅಧ್ಯಕ್ಷರೂ, ರಾಜ್ಯ ಮಂತ್ರಿ ಅದರ ಉಪಾಧ್ಯಕ್ಷರೂ ಆಗಿದ್ದು ಇದರಲ್ಲಿ ಇತರ 20 ಮಂದಿ ಸದಸ್ಯರು ಇರುತ್ತಾರೆ. ಉದ್ಯಮ ಸ್ಥಾಪನೆಗೆ ಅಗತ್ಯವಿರುವ ನಿಯಮಾವಳಿಗಳನ್ನು ರೂಪಿಸುವುದು ಮತ್ತು ಉದ್ಯಮ ಸ್ಥಾಪನೆಯನ್ನು ಉತ್ತೇಜಿಸಲು ಕೈಗೊಳ್ಳಬೇಕಾದ ಪ್ರೋತ್ಸಾಹಕ ಕ್ರಮಗಳನ್ನು ರೂಪಿಸುವುದು ಈ ಸಂಸ್ಥೆಯ ಕಾರ್ಯವಾಗಿದೆ.

**ಕೆ. ವಿ. ಐ. ಸಿ.:**
ಗ್ರಾಮೀಣ ಉದ್ಯಮಗಳನ್ನು ಬಲಪಡಿಸುವ ಉದ್ದೇಶದಿಂದ ಖಾದಿ ಹಾಗೂ ಗ್ರಾಮೋದ್ಯೋಗ ಕಮಿಷನನ್ನು ಸಂಸತ್ತಿನ ಅಂಗೀಕಾರದ ಮೂಲಕ 1957ರಲ್ಲಿ ಸ್ಥಾಪಿಸಲಾಯಿತು. ರಾಜ್ಯ ಖಾದಿ ಹಾಗೂ ಗ್ರಾಮೀಣ ಕೈಗಾರಿಕಾ ನಿಗಮಗಳ ಮುಖಾಂತರ ಖಾದಿ ಮತ್ತು ಗ್ರಾಮೀಣ ಉದ್ಯಮಗಳಿಗೆ ಪ್ರೋತ್ಸಾಹ ನೀಡುವುದು ಈ ಕಮಿಷನ್‌ನ ಕಾರ್ಯವಾಗಿದೆ. ಇದರ ಕಾರ್ಯವ್ಯಾಪ್ತಿಯಲ್ಲಿ ಖಾದಿ ಹಾಗೂ ಗ್ರಾಮೋದ್ಯೋಗಗಳಿಗೆ ಆರ್ಥಿಕ ಸಹಾಯ ನೀಡುವುದು, ತರಬೇತಿ ನೀಡುವುದು ಹಾಗೂ ಸಂಶೋಧನೆಯಲ್ಲಿ ತೊಡಗುವುದು ಮತ್ತು ಕಚ್ಚಾ ಸಾಮಾಗ್ರಿಗಳ ಸರಬರಾಜು ಹಾಗೂ ಸಿದ್ಧ ವಸ್ತುಗಳಿಗೆ ಮಾರುಕಟ್ಟೆ ಒದಗಿಸುವುದು ಒಳಗೊಂಡಿವೆ.

**ಇ. ಡಿ. ಐ. ಐ.:**
ದ ಆಂತ್ರೆಪ್ರೆನ್ಯೂರ್‌ಶಿಪ್ ಡೆವೆಲಪ್‌ಮೆಂಟ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯಾ ಸಂಸ್ಥೆಯನ್ನು 1983ರಲ್ಲಿ ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾ (ಐ. ಡಿ. ಬಿ. ಐ.), ಇಂಡಸ್ಟ್ರಿಯಲ್ ಕ್ರೆಡಿಟ್ ಆ್ಯಂಡ್ ಇಂಡಸ್ಟ್ರಿಯಲ್ ಕಾರ್ಪೊರೇಶನ್ ಆಫ್ ಇಂಡಿಯಾ (ಐ. ಸಿ. ಐ. ಸಿ. ಐ.) ಮತುತ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್. ಬಿ. ಐ.) ಗಳ ಪ್ರಾಯೋಜಕತ್ವದಲ್ಲಿ 1983ರಲ್ಲಿ ಸ್ವತಂತ್ರ ಸಂಸ್ಥೆಯಾಗಿ ಆರಂಭಿಸಲಾಯಿತು. ದೇಶದಲ್ಲಿ ಉದ್ಯಮಗಳನ್ನು ಸ್ಥಾಪಿಸಲು ಉತ್ಸುಕರಾದ ಭಾವಿ ಉದ್ಯಮಿಗಳಿಗೆ ತರಬೇತಿ ನಿಡುವ ತರಬೇತುದಾರರನ್ನು ತರಬೇತುಗೊಳಿಸುವುದು ಇದರ ಪ್ರಮುಖ ಕಾರ್ಯವಾಗಿದೆ. ಇದರ ಗ್ರಾಮೀಣ ಉದ್ಯಮ ಅಭಿವೃದ್ಧಿ ವಿಭಾಗವು ಕಿರು ಉದ್ಯಮಗಳ ಮೂಲಕ ಗ್ರಾಮೀಣಾಭಿವೃದ್ಧಿ, ಉದ್ಯೋಗಾವಕಾಶಗಳನ್ನು ಕಲ್ಪಿಸುವುದು ಮತ್ತು ಬಡತನ ನಿವಾರಣೆಗೆ ಶ್ರಮಿಸುತ್ತದೆ.

**ರಾಜ್ಯ ಮಟ್ಟದ ಸಂಸ್ಥೆಗಳು:**
ರಾಜ್ಯ ಮಟ್ಟದಲ್ಲಿ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಲು ರಾಷ್ಟ್ರೀಯ ಮಟ್ಟದ ಸಂಸ್ಥೆಗಳ ಜೊತೆ ರಾಜ್ಯ ಮಟ್ಟದ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ರಾಜ್ಯ ಆರ್ಥಿಕ ಸಂಸ್ಥೆಗಳು, ರಾಜ್ಯ ಕೈಗಾರಿಕಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ರಾಜ್ಯ ಕೈಗಾರಿಕಾ ಮೂಲಭೂತ ಸೌಕರ್ಯಗಳ ಪ್ರಾಧಿಕಾರಗಳ ಜೊತೆ ಕೈಗಾರಿಕಾ ನಿರ್ದೇಶನಾಲಯ ಮತ್ತು ರಾಜ್ಯ ಸಣ್ಣಕೈಗಾರಿಕಾ ಅಭಿವೃದ್ಧಿ ಪ್ರಾಧಿಕಾರಗಳನ್ನು ಸ್ಥಾಪಿಸಲಾಗಿದೆ.
ಕೈಗಾರಿಕಾ ನಿರ್ದೇಶನಾಲಯವು ರಾಜ್ಯ ಮಟ್ಟದಲ್ಲಿ ಎಲ್ಲಾ ಕೈಗಾರಿಕೆಗಳ ಅಭಿವೃದ್ಧಿಗೆ ಸ್ಥಾಪಿಸಲ್ಪಟ್ಟ ಪ್ರಮುಖ ಸಂಸ್ಥೆಯಾಗಿದೆ. ಉದ್ಯಮದ ನೋಂದಣಿ, ಕಚ್ಚಾವಸ್ತುಗಳ ಸರಬರಾಜು, ಕೈಗಾರಿಕಾ ಸ್ಥಾಪನೆಗೆ ಸ್ಥಳ ಹಂಚಿಕೆ ಮತ್ತು ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಈ ನಿರ್ದೇಶನಾಲಯದ ಕಾರ್ಯವ್ಯಾಪ್ತಿಯಲ್ಲಿ ಬರುತ್ತವೆ.
ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ, 1951 ಅನ್ವಯ ರಾಜ್ಯ ಹಣಕಾಸು ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಪ್ರಸ್ತುತ 18 ರಾಜ್ಯ ಹಣಕಾಸು ಸಂಸ್ಥೆಗಳಿದ್ದು ಅವುಗಳಲ್ಲಿ 17ನ್ನು ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆಯನ್ವಯ ಹಾಗೂ ತಮಿಳುನಾಡು ಇಂಡಸ್ಟ್ರಿಯಲ್ ಆ್ಯಂಡ್ ಇನ್ವೆಸ್ಟ್‌ಮೆಂಟ್ ಕಾರ್ಪೊರೇಶನ್ ಲಿ. ಸಂಸ್ಥೆಯನ್ನು ಕಂಪೆನಿ ಕಾಯಿದೆಯನ್ವಯ ಸ್ಥಾಪಿಸಲಾಗಿದೆ. ಪ್ರಾದೇಶಿಕ ಬೆಳವಣಿಗೆಗೆ ಅನುಕೂಲವಾಗುವಂತೆ ಉದ್ಯಮಗಳಿಗೆ ಆರ್ಥಿಕ ಸಹಾಯ ನೀಡುವುದು ಈ ಸಂಸ್ಥೆಗಳ ಪ್ರಮುಖ ಉದ್ದೇಶವಾಗಿದೆ. ಇದರ ಜೊತೆಗೆ ಹೂಡಿಕೆಯನ್ನು ಹೆಚ್ಚಿಸುವುದು, ಉದ್ಯೋಗಾವಕಾಶಗಳ ಸೃಷ್ಟಿ ಮತ್ತು ಉದ್ಯಮದ ವಿಸ್ತರಣೆ ಒಳಗೊಂಡಿವೆ. ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ಯಮಗಳಿಗೆ

ಸಾಲ ರೂಪದಲ್ಲಿ, ನೇರ ಇಕ್ವಿಟಿ/ಡಿಬೆಂಚರ್, ಗ್ಯಾರಂಟಿ ಮುಂತಾದ ವಿಧಾನಗಳ ಮೂಲಕ ಆರ್ಥಿಕ ಸಹಾಯ ಒದಗಿಸಲಾಗುತ್ತದೆ.

ರಾಜ್ಯಗಳ ಉದ್ಯಮಗಳ ಅಭಿವೃದ್ಧಿಗೆ ಹಾಗೂ ಉದ್ಯಮಗಳಲ್ಲಿ ಹೂಡಿಕೆಗೆ ಅನುಕೂಲವಾಗಲು ಸ್ಟೇಟ್ ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್ ಕಾರ್ಪೊರೇಶನ್/ಸ್ಟೇಟ್ ಇಂಡಸ್ಟ್ರಿಯಲ್ ಇನ್ವೆಸ್ಟ್‌ಮೆಂಟ್ ಕಾರ್ಪೊರೇಶನ್ ಎಂಬ ನಿಗಮಗಳನ್ನು ಕಂಪೆನಿ ಕಾಯಿದೆ, 1956ರ ಮೂಲಕ ಸ್ಥಾಪಿಸಲಾಯಿತು. ಇವು ಸರಕಾರದ ಅಧೀನದಲ್ಲಿರುವ ಸಂಸ್ಥೆಗಳಾಗಿದ್ದು ಆಯಾ ರಾಜ್ಯಗಳ ಉದ್ಯಮಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಪ್ರಸ್ತುತ ದೇಶದಲ್ಲಿ 28 ರಾಜ್ಯ ಕೈಗಾರಿಕಾಭಿವೃದ್ಧಿ ಹಾಗೂ ಎರಡು ಹೂಡಿಕೆಯ ಅಭಿವೃದ್ಧಿ ನಿಗಮಗಳಿವೆ. ಕೈಗಾರಿಕಾಭಿವೃದ್ಧಿ ಪ್ರಾಧಿಕಾರಗಳು ಕೈಗಾರಿಕಾ ಭೂಮಿ ಹಾಗೂ ರಸ್ತೆ, ವಿದ್ಯುತ್, ನೀರು, ಒಳಚರಂಡಿ ವ್ಯವಸ್ಥೆ ಮುಂತಾದ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತವೆ. ಇದರ ಜೊತೆಗೆ ಇವೆರಡು ನಿಗಮಗಳು ಸಣ್ಣ ಕೈಗಾರಿಕೆಗಳಿಗೆ ಸಾಲ ಮುಂತಾದ ಸೌಲಭ್ಯಗಳನ್ನು ಒದಗಿಸುತ್ತವೆ.

ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಗಳು ಕಂಪೆನಿ ಕಾಯಿದೆ, 1956ರ ಅನ್ವಯ ರಾಜ್ಯಸರಕಾರದ ಅಧಿನದಲ್ಲಿರುವ ನಿಗಮಗಳಾಗಿ ಸ್ಥಾಪಿಸಲ್ಪಟ್ಟಿದ್ದು ಆಯಾ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಗಳ ಸಣ್ಣ, ಅತೀ ಸಣ್ಣ ಹಾಗೂ ಗ್ರಾಮೀಣ ಕೈಗಾರಿಕೆಗಳ ಅವಶ್ಯಕತೆಗಳನ್ನು ಪೂರೈಸುತ್ತವೆ. ಈ ನಿಗಮಗಳ ಕಾರ್ಯಗಳೆಂದರೆ, ವಿರಳ ಕಚ್ಚಾವಸ್ತುಗಳ ಸರಬರಾಜು, ಬಾಡಿಗೆ ಆಧಾರದ ಮೇಲೆ ಯಂತ್ರೋಪಕರಣಗಳನ್ನು ಒದಗಿಸುವುದು, ಸಿದ್ಧ ವಸ್ತುಗಳಿಗೆ ಮಾರುಕಟ್ಟೆ ಒದಗಿಸುವುದು, ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಿ ಅವುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಸರಕಾರದ ಪರವಾಗಿ ಆರಂಭಿಕ ಬಂಡವಾಳ ಹೂಡಿಕೆ ಮತ್ತು ಉತ್ಪಾದನಾ ಘಟಕಗಳಿಗೆ ನಿಭಾವಣೆಯಲ್ಲಿ ಸಹಾಯ ಒದಗಿಸುವುದು.

**ಜಿಲ್ಲಾ ಮಟ್ಟದ ಸಂಸ್ಥೆಗಳು:**

ಸಣ್ಣ ಕೈಗಾರಿಕೆಗಳು ವ್ಯವಸ್ಥಿತವಾಗಿ ಬೆಳೆಯಬೇಕಾದರೆ ಜಿಲ್ಲಾ ಮಟ್ಟದ ಸಂಸ್ಥೆಗಳ ಸ್ಥಾಪನೆ ಅಗತ್ಯ. ಸ್ವಾತಂತ್ರ್ಯೋತ್ತರದ ಆರಂಭದಲ್ಲಿ ಇಂತಹ ಸೌಲಭ್ಯಗಳು ಇರಲಿಲ್ಲ. ಅರ್ವತ್ತರ ದಶಕದಲ್ಲಿ ಗ್ರಾಮೀಣ ಕೈಗಾರಿಕಾ ಯೋಜನೆಗಳೂ ಮತ್ತು ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮೂಲಕ ಜಿಲ್ಲಾ ಮಟ್ಟದ ಸಂಸ್ಥೆಗಳನ್ನು ಹುಟ್ಟು ಹಾಕಲಾಯಿತು.

**ಜಿಲ್ಲಾ ಕೈಗಾರಿಕಾ ಕೇಂದ್ರಗಳು**

ಜಿಲ್ಲಾ ಕೈಗಾರಿಕಾ ಕೇಂದ್ರಗಳು ಜಿಲ್ಲಾ ಮಟ್ಟದಲ್ಲಿ ಕಂಡುಬರುವ ಪ್ರಮುಖ ಸಂಸ್ಥೆಗಳಾಗಿವೆ. ಇವುಗಳನ್ನು ಸಣ್ಣ, ಗುಡಿ ಹಾಗೂ ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿಗೆ ಸರಕಾರವು 1978ರಲ್ಲಿ ಆರಂಭಿಸಿತು. ಜಿಲ್ಲಾ ಕೈಗಾರಿಕಾ ಕೇಂದ್ರಗಳು ಉದ್ಯಮಶೀಲತೆಯನ್ನು ಬೆಳೆಸುವ ಕಾರ್ಯಕ್ರಮಗಳು, ಮಾರುಕಟ್ಟೆಯ ಸಮೀಕ್ಷೆ, ಪ್ರಸ್ತಾವಿತ ಉದ್ಯಮದ ವರದಿ ತಯಾರಿಸುವುದು, ಸರಕಾರಿ ಸೌಲಭ್ಯಗಳನು ಒದಗಿಸುವುದು, ಹಾಗೂ ಉದ್ಯಮಗಳ ಅಭಿವೃದ್ಧಿಯಲ್ಲಿ ಒಳಗೊಂಡಿರುವ ವಿವಿಧ ಸಂಸ್ಥೆಗಳ ನಡುವೆ ಸಮನ್ವಯ ಸಾಧಿಸುವ ಕಾರ್ಯವನ್ನು ಮಾಡುತ್ತವೆ. ಈ ಕೇಂದ್ರಗಳು ಒದಗಿಸುವ ಸೇವೆಗಳೆಂದರೆ, ಜಿಲ್ಲೆಯಲ್ಲಿ ಲಭ್ಯವಿರುವ ಕಚ್ಚಾ ವಸ್ತುಗಳು ಮತ್ತಿತರ ಸಂಪನ್ಮೂಲಗಳಿಗೆ ಸಂಬಂಧಿಸಿದ ಸಮೀಕ್ಷೆ ನಡೆಸುವುದು, ಯಂತ್ರೋಪಕರಣಗಳ ಸರಬರಾಜು, ಕಚ್ಚಾ ವಸ್ತುಗಳನ್ನು ಒದಗಿಸುವುದು, ಸಾಲ ಸೌಲಭ್ಯ ಮತ್ತು ಮಾರುಕಟ್ಟೆ ಒದಗಿಸುವುದು ಮತ್ತು ಗುಣಮಟ್ಟ ಕಾಯ್ದುಕೊಳ್ಳುವ, ಸಂಶೋಧನೆ ನಡೆಸುವ ಹಾಗೂ ಕೈಗಾರಿಕಾಭಿವೃದ್ಧಿಯ ಕೇಂದ್ರದ ಸ್ಥಾಪನೆ. ಜಿಲ್ಲಾ ಕೈಗಾರಿಕಾ ಕೇಂದ್ರಗಳು ಅಭಿವೃದ್ಧಿ ಸಂಸ್ಥೆಗಳೊಡನೆ ಹತ್ತಿರದ ಸಂಬಂಧ ಹೊಂದಿವೆ. ಕೈಗಾರಿಕಾ ಸ್ಥಾಪನೆಯಲ್ಲಿ ವಿಳಂಬವಾಗುವುದನ್ನು ತಡೆದು ಕ್ಷಿಪ್ರ ಕೈಗಾರಿಕಾ ಬೆಳವಣಿಗೆಗೆ ಅನುಕೂಲ ಮಾಡಿಕೊಡುವುದು ಇದರ ಉದ್ದೇಶವಾಗಿದೆ. ಜಿಲ್ಲಾ ಕೈಗಾರಿಕಾ ಕೇಂದ್ರಗಳಲ್ಲಿ ಲಭ್ಯವಿರುವ ಹೆಚ್ಚುವರಿ ಸೇವೆಗಳೆಂದರೆ: ಅಗತ್ಯ ಮಾಹಿತಿಯನ್ನು ಪ್ರಕಟಪಡಿಸುವುದು, ಯಂತ್ರೋಪಕರಣಗಳ ಸರಬರಾಜು, ಕಚ್ಚಾ ಸಾಮಾಗ್ರಿಗಳನ್ನು ಒದಗಿಸುವುದು, ಸಾಲ ಸೌಲಭ್ಯ ಒದಗಿಸುವುದು, ಮಾರುಕಟ್ಟೆ ಒದಗಿಸುವುದು ಅಥವಾ ಮಾರಾಟಗಾರಿಕೆ, ಮತ್ತು ಸಲಹೆ ನೀಡುವುದು.

ಕೋಷ್ಟಕ 1.1 ರಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಕಾರ್ಯಗಳನ್ನು ನೀಡಲಾಗಿದೆ.

**ಕೋಷ್ಟಕ 1.1:** ಜಿಲ್ಲಾ ಕೈಗಾರಿಕಾ ಕೇಂದ್ರಗಳು: ಕಾರ್ಯಗಳು ಮತ್ತು ಯೋಜನೆಗಳು

| ಕ್ರ. ಸಂ. | ಕಾರ್ಯಗಳು ಮತ್ತು ಯೋಜನೆಗಳು |
|---|---|
| 1. | ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಪ್ರಧಾನ್ ಮಂತ್ರಿ ರೋಜ್‌ಗಾರ್ ಯೋಜನೆ |
| 2. | ಅಭಿವೃದ್ಧಿ ವಿಭಾಗಗಳ ಸಹಯೋಗದಿಂದ ಅತೀ ಸಣ್ಣ, ಸಣ್ಣ, ಮಧ್ಯಮ ಹಾಗೂ ದೊಡ್ಡ ಕೈಗಾರಿಕೆಗಳ ಸ್ಥಾಪನೆಗಳಲ್ಲಿ ಸಹಕಾರ ಒದಗಿಸುವುದು |
| 3. | ಉದ್ಯಮ ಸ್ಥಾಪನೆಗೆ ಆರ್ಥಿಕ ಸಹಾಯ ಹಾಗೂ ಸಾಲ ಸೌಲಭ್ಯ ಪಡೆಯಲು ಅಗತ್ಯವಿರುವ ವರದಿಗಳನ್ನು ತಯಾರಿಸುವುದು |
| 4. | ಅತೀ ಸಣ್ಣ, ಸಣ್ಣ, ಮಧ್ಯಮ ಹಾಗೂ ದೊಡ್ಡ ಕೈಗಾರಿಕೆಗಳಿಗೆ ಪ್ರೋತ್ಸಾಹಧನ ಹಾಗೂ ರಿಯಾಯಿತಿಗಳ ಅನುಮೋದನೆ |
| 5. | ಗ್ರಾಮೀಣ ಪ್ರದೇಶಗಳಲ್ಲಿ ನಿರಂತರ ಉದ್ಯೋಗ ಸೃಷ್ಟಿಗೆ ವಿಶ್ವ ಯೋಜನೆ |
| 6. | ವಿಶೇಷ ಫಲಾನುಭವಿಗಳಿಗೆ ಯೋಜನೆಗಳನ್ನು ಯೋಜಿಸುವುದು ಹಾಗೂ ಅನುಷ್ಠಾನಗೊಳಿಸುವುದು |
| 7. | ಕೈಗಾರಿಕೆಗಳ ಸ್ಥಾಪನೆಗೆ ಭೂಮಿ ಮತ್ತು ಶೆಡ್‌ಗಳ ಹಂಚುವುದು |
| 8. | ಗ್ರಾಮೀಣ ಕರಕುಶಲಕರ್ಮಿಗಳಿಗೆ ಬಡ್ಡಿರಹಿತ ಸಾಲ ನೀಡುವುದು |
| 9. | ಅತೀ ಸಣ್ಣ ಕೈಗಾರಿಕೆಗಳಿಗೆ ಕನಿಷ್ಠ ಬಂಡವಾಳದ ಮಂಜೂರು ಮಾಡುವುದು |
| 10. | ಪಶ್ಚಿಮ ಘಟ್ಟ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು |
| 11. | ಕೃಷಿ ಯೋಜನೆಗಳು |
| 12. | ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ |
| 13. | ಕೈಮಗ್ಗ ಮತ್ತು ವಿದ್ಯುತ್ ಮಗ್ಗ ಅಭಿವೃದ್ಧಿ ಯೋಜನೆಗಳು |
| 14. | ಕೈಗಾರಿಕಾ ಸಹಕಾರಿ ಸಂಘಗಳಿಗೆ ಸಹಕಾರ |
| 15. | ಜಿಲ್ಲಾ ಮಟದಲ್ಲಿ ವರಮಾನ ಸೃಷ್ಟಿ ಯೋಜನೆಗಳು ಮತ್ತು ಉದ್ಯಮಶೀಲತೆಯನ್ನು ಬೆಳೆಸುವ ಕಾರ್ಯಕ್ರಮಗಳಿಗೆ ಸಹಾಯ ಒದಗಿಸುವುದು |

| | |
|---|---|
| 16. | ಮಾನವ ಸಂಪನ್ಮೂಲಗಳ ಸಮರ್ಪಕ ಬಳಕೆಯಾಗುವ ದೃಷ್ಟಿಯಿಂದ ಯೋಜನೆಗಳ ಮೌಲ್ಯಮಾಪನ ಮಾಡುವುದು |
| 17. | ಉದ್ಯಮ ಕ್ಷೇತ್ರಕ್ಕೆ ಸಂಬಂಧಿಸಿದ ವಿಚಾರಗೋಷ್ಠಿಗಳು, ಅಧಿವೇಶನಗಳು, ಕಾರ್ಯಾಗಾರಗಳು, ಮಾಹಿತಿ ಶಿಬಿರಗಳು, ಮಾರಾಟಗಾರರು ಹಾಗೂ ಖರೀದಿದಾರರ ಸಮ್ಮೇಳನಗಳು, ರಫ್ತಿಗೆ ಸಂಬಂಧಿಸಿದ ಕಾರ್ಯಕ್ರಮಗಳು, ಇತ್ಯಾದಿ |
| 18. | ಕೈಗಾರಿಕಾ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿಗೆ ಸಂಬಂಧಿಸಿದ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು |
| 19. | ನಷ್ಟದಲ್ಲಿ ನಡೆಯುವ ಕೈಗಾರಿಕೆಗಳನ್ನು ಗುರುತಿಸಿ ಅವುಗಳಿಗೆ ಜೀವ ತುಂಬುವುದು |
| 20. | ಸ್ತ್ರೀಯರು, ಪರಿಶಿಷ್ಟ ಜಾತಿ/ಪಂಗಡಗಳು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದ ಉದ್ಯಮಿಗಳಿಗೆ ಆದ್ಯತೆಯ ಮೇರೆಗೆ ಸಹಾಯ ನೀಡುವುದು |
| 21. | ಕೈಗಾರಿಕಾ ಕ್ಷೇತ್ರಕ್ಕೆ ಸಂಬಂಧಿಸಿದ ಇತರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು |